ವಿಶ್ವವಿದ್ಯಾನಿಲಯ ಪ್ರಾರಂಭವಾಗುತ್ತದೆ. ಪಂಜಾಬ್‌ನಲ್ಲಿ 800 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಪಶುವೈದ್ಯಕೀಯ ವಿಶ್ವವಿದ್ಯಾನಿಲಯವನ್ನು ಮಾಡಿದ್ದಾರೆ, ವೆಸ್ಟ್‌ಬೆಂಗಾಲ್‌ನಲ್ಲಿ ವಿಶ್ವವಿದ್ಯಾನಿಲಯ ಮಾಡಿದ್ದಾರೆ, ತಮಿಳುನಾಡಿನಲ್ಲಿ ಪಶುವೈದ್ಯಕೀಯ ವಿಶ್ವವಿದ್ಯಾನಿಲಯ ಮಾಡಿದ್ದಾರೆ. ಕರ್ನಾಟಕದಲ್ಲಿ ಈ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದರೆ ರೈತರಿಗೆ ಬಹಳ ಅನುಕೂಲವಾಗುತ್ತದೆ. ಅದಕ್ಕೋಸ್ಕರ ಇದನ್ನು ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಸಿ.ಭೈರೇಗೌಡ: ಕರ್ನಾಟಕದಲ್ಲಿ ವೆಟರ್‌ನರಿ ಯೂನಿವರ್ಸಿಟಿಯನ್ನು ಪ್ರಾರಂಭ ಮಾಡುವುದಕ್ಕೆ ಕೇವಲ 70 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ ಸಾಕು ಎಂದೂ, ಇನ್ನೊಂದು ಕಡೆ ಪಂಜಾಬ್‌ನಲ್ಲಿ 800 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ವೆಟರ್‌ನರಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಿದ್ದಾರೆಂದು ಮಾನ್ಯ ರಾಜಣ್ಣನವರು ಹೇಳುತ್ತಾರೆ. ಅದನ್ನು ಮಾನ್ಯ ರಾಜಣ್ಣನವರು ಸಮರ್ಥನೆ ಮಾಡುತ್ತಿದ್ದಾರೆ. ಆದರೆ ನನ್ನ ವಾದ ಏನಿದೆ ಎಂದರೆ ಕರ್ನಾಟಕದಲ್ಲಿ ಪಶುವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವಂತಹ ಅವಶ್ಯಕತೆ ಇಲ್ಲವೆಂದು ಸರ್ಕಾರದ ಭಾವನೆ ಇದೆ.

ವಿಷಯ: ಕರ್ನಾಟಕ ಗೃಹ ನಿರ್ಮಾಣ ಮಂಡಳಿ ವಾಣಿಜ್ಯ ಸಂಕೀರ್ಣ

253 (1632)

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ): ಮಾನ್ಯ ವಸತಿ ಸಚಿವರು ಈ ಕಳೆಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರಿನ ಕುವೆಂಪು ನಗರದಲ್ಲಿರುವ ಕರ್ನಾಟಕ ಮಂಡಳಿಯ ವಾಣಿಜ್ಯ ಸಂಕೀರ್ಣದ ಕಾಮಗಾರಿ ಪೂರ್ಣಗೊಂಡಿದೆಯೆ?

ಆ) ಹಾಗಿದ್ದಲ್ಲಿ, ಇದನ್ನು ಇನ್ನು ಸಾರ್ವಜನಿಕರ ಉಪಯೋಗಕ್ಕೆ (ವ್ಯಾಪಾರ ವಹಿವಾಟು ನಡೆಸಲು) ಅವಕಾಶ ಕಲ್ಪಿಸದಿರಲು ಕಾರಣಗಳೇನು?

ಇ) ಇದನ್ನು ಯಾವಾಗ ಸಾರ್ವಜನಿಕರ ಉಪಯೋಗಕ್ಕೆ ಬಿಡಲಾಗುವುದು?

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು):

ಅ) ಮೈಸೂರಿನ ಕುವೆಂಪುನರಗದಲ್ಲಿರುವ ಕರ್ನಾಟಕ ಗೃಹ ಮಂಡಳಿ ವಾಣಿಜ್ಯ ಸಂಕೀರ್ಣದ ಕಾಮಗಾರಿಗಳು ಬಾಹ್ಯ ವಿದ್ಯುತ್ ಸಂಪರ್ಕ ಹೊರತಾಗಿ ಪೂರ್ಣಗೊಂಡಿರುತ್ತದೆ.

ಆ) ನೆಲಮಹಡಿಯ 36 ಮಳಿಗೆಗಳ ಪೈಕಿ ನ್ಯಾಯಾಲಯದಿಂದ ತಡೆ ಇರುವ ಎರಡು ಮಳಿಗೆಗಳ ಹೊರತಾಗಿ ಉಳಿದ ಮಳಿಗೆಗಳನ್ನು ಹರಾಜು ಮೂಲಕ ವಿತರಿಸಲಾಗಿದೆ. ಇವುಗಳ ಪೈಕಿ 4 ಮಳಿಗೆಗಳವರು ಮಳಿಗೆಗಳ ಸ್ವಾಧೀನವನ್ನು ಪಡೆದುಕೊಂಡಿರುತ್ತಾರೆ. ಮೊದಲನೇ ಮಹಡಿಯ ಕಛೇರಿ ಬ್ಲಾಕ್‌ಗಳನ್ನು ವಿತರಿಸುವ ಪ್ರಕ್ರಿಯೆ ಮಂಡಳಿ ಕಛೇರಿಯಲ್ಲಿ ನಡೆಯುತ್ತಿದೆ.

ಇ) ನೆಲಮಹಡಿಯ ಮಳಿಗೆಗಳನ್ನು ಹರಾಜಿನಲ್ಲಿ ಪಡೆದವರು ಕರಾರು ಮಾಡಿಕೊಂಡ ನಂತರ ಮಳಿಗೆಗಳ ಸ್ವಾಧೀನವನ್ನು ಕೊಡಲಾಗುವುದು. ಮೊದಲನೇ ಮಹಡಿಯ ಕಛೇರಿ ಬ್ಲಾಕ್‌ಗಳನ್ನು ಮಂಡಳಿಯಿಂದ ಹಂಚಿಕೆ ವಿವರಗಳು ಅಂತಿಮವಾದ ನಂತರ ಕರಾರು ಮಾಡಿಸಿಕೊಂಡು ನಂತರ ಸ್ವಾಧೀನವನ್ನು ಕೊಡಲಾಗುವುದು.

ಶೀ ಹೆಚ್.ಎಸ್.ಶಂಕಲಿಂಗೇಗೌಡ: ಮಾನ್ಯ ಸಚಿವರುಗಳಿಗೆ ಗೃಹ ಮಂಡಳಿಯ ಅಧಿಕಾರಿಗಳು ನೀಡಿರುವಂತಹ ಮಾಹಿತಿ ವಸ್ತುಸ್ಥಿತಿಗೆ ಅನುಗುಣವಾಗಿಲ್ಲವೆಂದು ನಾನು ಸದನಕ್ಕೆ ಹೇಳಬಯಸುತ್ತೇನೆ. 1998ರಲ್ಲಿ ಕುವೆಂಪುನಗರದಲ್ಲಿರುವ ಕರ್ನಾಟಕ ಗೃಹ ಮಂಡಳಿಯ ವಾಣಿಜ್ಯ ಸಂಕೀರ್ಣ ಪ್ರಾರಂಭವಾಯಿತು. ಇಲ್ಲಿ 38 ಮಳಿಗೆಗಳು ಇದೆ. ಗುತ್ತಿಗೆದಾರರು ಕಟ್ಟಡವನ್ನು ಪೂರ್ಣಗೊಳಿಸಿ 4 ವರ್ಷಗಳ ಹಿಂದೆಯೇ ಗೃಹಮಂಡಳಿಗೆ ಕೊಟ್ಟಿರುತ್ತಾರೆ. ಆ ಕಟ್ಟಡಕ್ಕೆ ಇನ್ನೂ ಕೂಡ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಲ್ಲ. ಅದು ಕಳ್ಳಕಾಕರ, ಪೋಲಿ ದನಗಳು ಮತ್ತು ಇಸ್ಪೀಟು ಆಡುವವರ ಮಂದಿರವಾಗಿದೆ. ಒಂದೂವರೆ ಕೋಟಿ ರೂಪಾಯಿ ಕೊಟ್ಟು ಏನು ಕಟ್ಟಡ ಕಟ್ಟಿದ್ದೀರಲ್ಲಾ, ಆ ಕಟ್ಟಡದಲ್ಲಿ ಈ ಅವ್ಯವಹಾರಗಳು ನಡೆಯುತ್ತಿದೆ. ಈಗ ಅಲ್ಲಿ ನಿರ್ಮಾಣವಾಗಿರುವಂತಹ ಕಟ್ಟಡವನ್ನು ಇನ್ನೂ ಯಾರಿಗೂ ಅಲಾಟ್ ಮಾಡದೆಯೇ ಹಾಗೆಯೇ ಉಳಿಸಿಕೊಂಡಿದ್ದಾರೆ. ಇದು ಸತ್ಯಕ್ಕೆ ದೂರವಾದಂತಹ ಮಾತು ಎಂದು ಸ್ಪಷ್ಟವಾಗಿ ಸದನದಲ್ಲಿ ಹೇಳುತ್ತೇನೆ. ಇವತ್ತು ಕೆಹೆಚ್‌ಬಿನಿಂದ ಅಲ್ಲಿ ಹಣ ಪೋಲಾಗುತ್ತಿದೆ. ಉಳಿದ 4 ವರ್ಷಗಳಿಂದ ಪೂರ್ತಿ ಹಣ ಬಂದಿದ್ದರೆ ಈ ಸಮಸ್ಯೆಯನ್ನು ನಿವಾರಿಸಬಹುದಾಗಿತ್ತೆಂದು ಸಚಿವರ ಗಮನಕ್ಕೆ ತರುತ್ತಿದ್ದೇನೆ. ದಯಮಾಡಿ ಇದನ್ನು ಕಾರ್ಯರೂಪಕ್ಕೆ ತರುವುದಕ್ಕೆ ತಾವೆಲ್ಲಾ ಪ್ರಯತ್ನ ಮಾಡಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಉಪಾಧ್ಯಕ್ಷರೆ, ಮೈಸೂರು ನಗರದ ಕುವೆಂಪುನಗರದಲ್ಲಿ 38 ವಾಣಿಜ್ಯ ಸಂಕೀರ್ಣದ ಮಳಿಗೆಗಳಿವೆ. ಅದರಲ್ಲಿ 2 ಮಳಿಗೆಗಳು ನ್ಯಾಯಾಲಯದಲ್ಲಿ ಇರುವುದರಿಂದ ಅದನ್ನು ಹರಾಜು ಹಾಕಲಿಲ್ಲ. ಉಳಿದ 36 ಮಳಿಗೆಗಳನ್ನು ಈಗಾಗಲೇ ಹರಾಜು ಹಾಕಿದ್ದೇವೆ. ಅದರಲ್ಲಿ 4 ಮಳಿಗೆಗಳಿಗೆ ಈಗಾಗಲೇ ಹಣ ಬಂದಿದೆ. ಉಳಿದ ಬಾಕಿ ಮಳಿಗೆಗಳಿಗೆ ಸ್ವಲ್ಪ ಹಣವನ್ನು ಕಟ್ಟಬೇಕಾಗಿದೆ. ಅವರಿಗೆ ನಾವು ನೋಟೀಸ್‌ನ್ನು ಕೊಟ್ಟಿದ್ದೇವೆ. ಅವರು ಹಣವನ್ನು ಕಟ್ಟಿದ ತಕ್ಷಣ ನಾವು ಅವರಿಗೆ ಮಳಿಗೆಯನ್ನು ಕೊಡುತ್ತೇವೆ. ಇದನ್ನು ನಾವು

ಬಹಿರಂಗವಾಗಿ ಹರಾಜು ಹಾಕಿದ್ದೇವೆ. ನಾವೇನೂ ಕದ್ದು ಏನು ಮಾಡಿಲ್ಲ. ಅವರು ಹಣವನ್ನು ಕಟ್ಟಿದ ತಕ್ಷಣ ನಾವು ಅವರ ವಶಕ್ಕೆ ಕಟ್ಟಡವನ್ನು ಕೊಡುತ್ತೇವೆ. ವಿದ್ಯುತ್ ಕೆಲಸವನ್ನು ಇನ್ನು 8- 10 ದಿವಸಗಳಲ್ಲಿ ಅಲ್ಲಿ ಪ್ರಾರಂಭಿಸುತ್ತೇವೆ.

ಶ್ರೀ ಹೆಚ್.ಎಸ್.ಶಂಕಲಿಂಗೇಗೌಡ: ನಾನೇ ಅಲ್ಲಿಗೆ ಖುದ್ದಾಗಿ ಹೋಗಿ ಬಂದಿದ್ದೇನೆ. ಅದು ಪೋಲಿಪಟಾಲಮ್‌ಗಳ, ಕಳ್ಳಕಾಕರ ಜಾಗವಾಗಿದೆ. ಜನಗಳು ಅಲ್ಲಿ ಓಡಾಡುವುದಕ್ಕೆ ಆಗದಂತಹ ಪರಿಸ್ಥಿತಿಯಾಗಿದೆ. ಇದನ್ನು ಸರಿಪಡಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ: ಸದರಿ ಕಟ್ಟಡವನ್ನು ಯಾವ ಬಿಡ್ಡುದಾರರು ಪಡೆದಿರುತ್ತಾರೋ ಅವರು ದುಡ್ಡು ಕಟ್ಟಿದ ತಕ್ಷಣ ಅವರಿಗೆ ಎಲ್ಲಾ ಸೌಕರ್ಯವನ್ನು ಒದಗಿಸಿ ಸದರಿ ಮಳಿಗೆಯನ್ನು ಅವರ ವಶಕ್ಕೆ ಕೊಡುತ್ತೇನೆ. 4 ಕನ್‌ಫರ್‌ಮೇಷನ್ ಆಗಿದೆ. ಇನ್ನು 34 ಮಳಿಗೆಗಳಿಗೆ ಆಗಿಲ್ಲ.

ಶ್ರೀ ಇ.ಮಾರುತಿರಾವ್ ಪವಾರ್: ಹರಾಜಿನಲ್ಲಿ ಆ ಅಂಗಡಿಯನ್ನು ತೆಗೆದುಕೊಂಡವರಿಗೆ ವಿದ್ಯುಚ್ಛಕ್ತಿಯನ್ನು ಕೊಡದಿದ್ದರೆ ಅವರು ಹೇಗೆ ಮಾಡುತ್ತಾರೆ? ವಿದ್ಯುಚ್ಚಕ್ತಿಯನ್ನು ಮೊದಲು ಕೊಡಿ ಎಂದು ಅವರಲ್ಲಿ ಮನವಿ ಮಾಡುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ: ವಿದ್ಯುಚ್ಚಕ್ತಿಯನ್ನು ನಾನು ಕೊಡಿಸಿಕೊಡುತ್ತೇನೆ. ಆ 34 ಮಳಿಗೆಗಳನ್ನು ಪಡೆದಿರುವವರಿಂದ ಹಣವನ್ನು ಕಟ್ಟಿಸುವುದಕ್ಕೆ ನೀವು ಸ್ವಲ್ಪ ಪ್ರಯತ್ನ ಮಾಡಿ, ನಾನು ಆ ಕೆಲಸವನ್ನು ಮಾಡಿಸಿಕೊಡುತ್ತೇನೆ.

ಶ್ರೀ ಇ.ಮಾರುತಿರಾವ್ ಪವಾರ್: ನ್ಯಾಯಾಲಯದಲ್ಲಿ ಇಬ್ಬರು ಮಳಿಗೆಗಳನ್ನು ಪಡೆದಿರುವವರು ಇದ್ದಾರಲ್ಲ, ಆ ಇಬ್ಬರನ್ನು ಕಾಂಪ್ರೋಮೈಸ್ ಮಾಡಿ ಒಪ್ಪಿಸಿಬಿಡಬಹುದು.

ವಿಷಯ: ಹೊನ್ನಾವರ ತಾಲ್ಲೂಕಿನಲ್ಲಿ ಬಸ್ ಡಿಪೋ.

254 (1586)

ಶ್ರೀ ಶಿವಾನಂದ ನಾಯಕ್ (ಭಟ್ಕಳ್): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನಲ್ಲಿ ಬಸ್ ಡಿಪೋ ಸ್ಥಾಪಿಸುವ ಅವಶ್ಯಕತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?